ಸೃಜನಿ

SRUJANI: Indian Journal of Innovative Research and Development (SIJIRD)
Volume-4 Issue 5, November-December 2025, Pp. 80-85
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

ಜಯಪ್ರಕಾಶ ಮಾವಿನಕುಳಿ ಅವರ ಆಯ್ದ ಕವಿತೆಗಳಲ್ಲಿ ಪ್ರಕೃತಿ ಚಿತ್ರಣ

ಅನಿಲ್ ಕುಮಾರ್ ಎಸ್[1] ಮತ್ತು ಡಾ.ಡಿ.ವಿಜಯಲಕ್ಷ್ಮಿ[2]
[1]ಸಂಶೊಧನಾ ವಿದ್ಯಾರ್ಥಿ, [2]ಪ್ರಾಧ್ಯಾಪಕರು
ಕನ್ನಡ ವಿಭಾಗ, ಮಹಾರಾಜ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

Abstract:
ದಿನನಿತ್ಯದ ಬದುಕು ಸಂಕೀರ್ಣವಾಗುತ್ತಿರುವ ಈ ಕಾಲದಲ್ಲಿ ತೋಚಿದ್ದನ್ನು ಗೀಚುವ ಗೀಳು ಎಲ್ಲರಲ್ಲಿಯೂ ಅಡಗಿರುತ್ತದೆ. ಆದರೆ ಅವೆಲ್ಲವೂ ಸಾಹಿತ್ಯದ ಚೌಕಟ್ಟಿನೊಳಗೆ ಒಳಪಡುವುದಿಲ್ಲ. ಈ ದೃಷ್ಟಿಯಿಂದ ಸೃಜನಶೀಲ ಬರವಣಿಗೆ ಗಾಂಭೀರ್ಯ, ಚಿಂತನಶೀಲತೆ ಮತ್ತು ಹೊಸತನಗಳನ್ನು ಒಳಗೊಳ್ಳಬೇಕಾದ ಅನಿವಾರ್ಯತೆಗಳಿಗೆ ಒಳಪಟ್ಟಿದೆ. ಇವೆಲ್ಲಕ್ಕಿಂತಲೂ ಮುಖ್ಯವಾಗಿ ಇಂದು ಕವಿ, ಸಹೃದಯನನ್ನು ಮುಟ್ಟುವ ಕಲೆ ಕುರಿತು ಗಂಭೀರವಾಗಿ ಆಲೋಚಿಸಬೇಕಾಗಿದೆ. ಪ್ರಸ್ತುತ ಲೇಖನದಲ್ಲಿ ಜಯಪ್ರಕಾಶ ಮಾವಿನಕುಳಿ ಅವರ ಆಯ್ದ ಕವಿತೆಗಳಲ್ಲಿ ಪ್ರಕೃತಿ ಚಿತ್ರಣವನ್ನು ಕುರಿತು ಅಧ್ಯಯನ ಮಾಡಲಾಗಿದೆ.

Keywords: *ಕನ್ನಡ ಸಾಹಿತ್ಯ, ಜಯಪ್ರಕಾಶ ಮಾವಿನಕುಳಿ, ಕವಿತೆ, ಪ್ರಕೃತಿ ಚಿತ್ರಣ*

ಪೀಠಿಕೆ

ನವೋದಯ, ನವ್ಯ ಕಾಲಘಟ್ಟದ ನಂತರದಲ್ಲಿ ಹುಟ್ಟಿಕೊಂಡ ಹೊಸತೊಂದು ಕಾವ್ಯ ಪರಂಪರೆ ಒಂದು ಅರ್ಥದಲ್ಲಿ ಹಿಂದಿಗಿಂತಲೂ ಹೆಚ್ಚು ಸಾಮಾಜಿಕ ಕಾಳಜಿಯನ್ನೊಳಗೊಂಡು ಹೊರಬರತೊಡಗಿದವು. ಇಲ್ಲಿಯವರೆಗೆ ಮೂಕವಾಗಿದ್ದ ಕೆಳವರ್ಗದಿಂದ ಬಂದ ಕೆಲವು ಲೇಖಕರು ಈ ಕಾಲಘಟ್ಟದಲ್ಲಿ ಹೆಚ್ಚು ಮಾತನಾಡತೊಡಗಿದರು. ತಳ ಹಾಗೂ ಮಧ್ಯಮ ವರ್ಗದ ಮುಖವಾಣಿಯಾಗಿದ್ದ ಈ ಕಾಲಘಟ್ಟದ ಕಾವ್ಯಗಳು ತಮ್ಮ ಮತ್ತು ತಮ್ಮ ವರ್ಗದ ವಿಶಿಷ್ಟ ಅನುಭವಗಳನ್ನು ಅನೇಕ ತರುಣ ಸಾಹಿತಿಗಳು ಕನ್ನಡ ಕಾವ್ಯ ಪರಂಪರೆಗೆ ಕೊಡುಗೆಯಾಗಿ ನೀಡಿದರು. ನವ್ಯಕಾವ್ಯ ಬರೆಯುತ್ತಿದ್ದ ಕೆಲವು ಕವಿಗಳು ಸಹ ಎಚ್ಚೆತ್ತುಕೊಂಡು ಈ ಕಾಲಘಟ್ಟದ ನಂತರದಲ್ಲಿ ತಮ್ಮ ಧೋರಣೆ ಮತ್ತು ಕಾವ್ಯಾಭಿವ್ಯಕ್ತಿಗಳನ್ನು ವಿಮರ್ಶೆಗೆ ಒಳಗು ಮಾಡಿ, ಸಮಾಜಕ್ಕೆ ಹೆಚ್ಚು ಅಭಿಮುಖವಾದ ಕಾವ್ಯವನ್ನು ರಚಿಸತೊಡಗಿದರು. ಹೀಗೆ ನವ್ಯ ಕಾಲಘಟ್ಟದ ನಂತರದಲ್ಲಿ ಸಾಹಿತ್ಯ ರಚನೆಯಲ್ಲಿ ತೊಡಗಿದ ಹಲವು ವೈಚಾರಿಕ, ಸಾಮಾಜಿಕ ಕಾಳಜಿಗಳನ್ನೊಳಗೊಂಡ ಸಾಹಿತಿಗಳ ಸಾಲಿನಲ್ಲಿ ನಿಲ್ಲುವವರು ಜಯಪ್ರಕಾಶ ಮಾವಿನಕುಳಿ ಯವರಾಗಿದ್ದಾರೆ.

ಜಯಪ್ರಕಾಶ ಮಾವಿನಕುಳಿ ಅವರು ವೃತ್ತಿಯಲ್ಲಿ ರಾಜ್ಯಶಾಸ್ತ್ರ ಪ್ರಾಧ್ಯಾಪಕರಾಗಿದ್ದು, ಪ್ರವೃತ್ತಿಯಲ್ಲಿ ಕಾದಂಬರಿ, ಸಣ್ಣಕತೆ, ಸಂಶೋಧನೆ, ಸಂಪಾದನಾ ಕ್ಷೇತ್ರಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ಸಾಹಿತ್ಯ ಕ್ಷೇತ್ರದ ವಿವಿಧ ಪ್ರಕಾರಗಳಲ್ಲಿ ತಮ್ಮ ಛಾಪನ್ನು

Please cite this article as: ಅನಿಲ್ ಕುಮಾರ್ ಎಸ್ ಮತ್ತು ಡಿ. ವಿಜಯಲಕ್ಷ್ಮಿ. (2025). ಜಯಪ್ರಕಾಶ ಮಾವಿನಕುಳಿ ಅವರ ಆಯ್ದ ಕವಿತೆಗಳಲ್ಲಿ ಪ್ರಕೃತಿ ಚಿತ್ರಣ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವಲಪ್‌ಮೆಂಟ್*, 4(5), 80–85

ಮೂಡಿಸಿದ್ದಾರೆ. ಆದರೂ ಜಯಪ್ರಕಾಶ ಮಾವಿನಕುಳಿ ಅವರ ಆಸಕ್ತಿ ಕಾವ್ಯಕ್ಷೇತ್ರದ ಕಡೆಗೆ ಮೀಸಲಿರುವುದನ್ನು ಅವರು ಪ್ರಕಟಿಸಿರುವ ಕಾವ್ಯಕೃತಿಗಳು ಸಾರುತ್ತವೆ. ಇದುವರೆಗೆ ರಚಿಸಿರುವ ಅವರ ಕವನಸಂಕಲನಗಳು ಈ ಕೆಳಗಿನಂತಿವೆ –

- ಸಾಗರದಲ್ಲಿ ಸಾಯಂಕಾಲ–1978
- ಅಶ್ವತ್ಥಾಮ–1984
- ವಿರಹ ಕಡಲು–2004
- ಕಾಲಯಾನ–2014

ಜಯಪ್ರಕಾಶ ಮಾವಿನಕುಳಿ ಅವರು ಸಾಮಾಜಿಕ ಮತ್ತು ವೈಚಾರಿಕ ಪ್ರಜ್ಞೆಯ ಕವಿತೆಗಳನ್ನು ರಚಿಸಿರುವಂತೆಯೇ ಪ್ರಕೃತಿ ಕೇಂದ್ರಿತ ಕವಿತೆಗಳನ್ನೂ ಸಹ ರಚಿಸಿದ್ದಾರೆ. ಇಲ್ಲಿ ಮಳೆ, ಬಿಸಿಲು, ತೆಂಗು, ಭೂಮಿ ಎಲ್ಲವೂ ವಸ್ತುಗಳಾಗಿ ಕವಿತೆಯ ರೂಪವನ್ನು ಪಡೆದುಕೊಂಡಿವೆ. ಮನುಷ್ಯನಿಗಿಂತಲೂ ಹೆಚ್ಚು ಭಾವನೆಗಳನ್ನು ಹೊಂದಿರುವುದು, ಯಾವುದೇ ಕಲ್ಮಷವಿಲ್ಲದೇ ನಿಷ್ಕಲ್ಮಷ ಪ್ರೀತಿಯನ್ನು ನೀಡುವುದು ಪ್ರಾಣಿ–ಪಕ್ಷಿಗಳಾಗಿವೆ.

ಪ್ರಾಣಿ–ಪಕ್ಷಿಗಳಿಗಿರುವ ನಿಯತ್ತು ತಾವೇ ಹೆತ್ತು ಹೊತ್ತು ಸಾಕಿದ ಮಕ್ಕಳಿಗಿರುವುದಿಲ್ಲ ಎನ್ನುವುದನ್ನು ಕವಿ 'ತಂಗಿ ಹೇಳಿದಳು' ಎನ್ನುವ ಕವಿತೆಯಲ್ಲಿ ನಿರೂಪಿಸುತ್ತಾರೆ. ಕವಿತೆಯಲ್ಲಿ ಬರುವ ಕವಿಯ ತಂಗಿಯ ಬದುಕಿನ ನೋವಿನ ಕತೆ ಇಲ್ಲಿ ಕರುಣಾಜನಕವಾಗಿ ಮೂಡಿಬಂದಿದೆ. ಇಲ್ಲಿ ತಂಗಿ ಒಂದು ಗಿಳಿಯನ್ನು ಸಾಕಿದ್ದಳು. ಆ ಗಿಳಿ ಇವಳ ಬಳಿ ಅತ್ಯಂತ ಪ್ರೀತಿಯಿಂದ ನಡೆದುಕೊಂಡಿತು. ಗಿಳಿ ಮೊಟ್ಟೆಯಿಟ್ಟು ಮರಿಮಾಡಿ ಮನೆಯೆಲ್ಲಾ ಹಾರಾಡುತ್ತಾ ಮನೆಯನ್ನೆಲ್ಲಾ ಹಸನಾಗಿಸಿತು. ಸದಾ ಹಾಡುತ್ತಾ ಎಲ್ಲರನ್ನು ಸುಖದಿಂದ ಇರುವಂತೆ ಮಾಡಿತು. ಅದೇ ತಂಗಿ ಒಂದು ಬಳ್ಳಿಯನ್ನು ನೆಟ್ಟಳು ಅದು ಗಿಡವಾಗಿ ನೆರಳನ್ನು ನೀಡಿತು. ಸುಂದರವಾದ ಹೂಬಿಟ್ಟು ನಳನಳಿಸುತ್ತಾ ತಂಗಿಯ ಮನಸ್ಸನ್ನು ಸಂತಸಗೊಳಿಸಿತು. ಆದರೆ ಅದೇ ತಂಗಿ ಒಂಭತ್ತು ತಿಂಗಳು ಹೊತ್ತು ಹೆತ್ತು ಬೆಳೆಸಿದ ಅವಳ ಎರಡು ಮಕ್ಕಳಿಗೆ ಎದೆ ಹಾಲು ಹಿಂಡಿ ಕೊಟ್ಟು ಬೆಳೆಸಿದಳು. ಬದುಕನ್ನು ಹಸನಾಗಿಸಿಕೊಳ್ಳಲು ಮಕ್ಕಳಿಗೆ ಅಕ್ಷರವನ್ನು ಕಲಿಸಿದಳು. ತನ್ನ ಸರ್ವಸ್ವವನ್ನೇ ಆ ಮಕ್ಕಳಿಗಾಗಿ ಧಾರೆಯೆರೆದಳು. ಆದರೆ ಗಿಳಿ, ಬಳ್ಳಿ ನೀಡಿದ ಸುಖಸಂತೋಷವನ್ನು ಸಹ ಆ ಎರಡು ಮಕ್ಕಳು ನೀಡಲಿಲ್ಲ. ಕೊನೆಗೆ ಆ ತಂಗಿ –

ಬಿಸಿಲಲ್ಲಿ
ಬರಿಗಾಲಲ್ಲಿ
ನಿಂತು–ತಂಗಿ ಹೇಳಿದಳು[1] – **(ತಂಗಿ ಹೇಳಿದಳು)**

ಎನ್ನುವಲ್ಲಿ ಬಳ್ಳಿ ನೀಡಿದ ನೆರಳನ್ನು ಸಹ ತಾನೆತ್ತ ಮಕ್ಕಳು ನೀಡದೇ ಹೆತ್ತತಾಯಿಯನ್ನು ಬರಿಗಾಲಿನಲ್ಲಿ ಬಿಸಿಲಿನಲ್ಲಿ ಒಂಟಿಯಾಗಿಸಿರುವುದು ಎಂಥಹವರ ಮನಸ್ಸನ್ನೂ ಸಹ ಕರಗಿಸಿಬಿಡುತ್ತದೆ. ಅವಳು ಸಾಕಿದ ಗಿಳಿ ಮನೆಯ ತುಂಬಾ ಮರಿಗಳನ್ನಿಟ್ಟು ಸದಾ ಇವಳನ್ನು ನಗಿಸಿ ಕುಣಿಸಿತ್ತು. ಆದರೆ ಇವಳೆತ್ತ ಮಕ್ಕಳು ಅವರ ಮಕ್ಕಳೊಂದಿಗೆ ಇವಳನ್ನು ಇರಲು ಸಹ ಬಿಡದೆ ಬೀದಿಗಟ್ಟಿರುವುದು ಕಲಿತ ಮಕ್ಕಳು ಹೆತ್ತವರನ್ನು ಹೇಗೆ ಜೋಪಾನ ಮಾಡುತ್ತಿದ್ದಾರೆ ಎನ್ನುವ ಭೀತಿ ಹುಟ್ಟಿಸುತ್ತದೆ. ಒಂದು ಪಕ್ಷಿ, ಮಾತು ಬಾರದ ಬಳ್ಳಿ ನೀಡುವ ಸುಖವನ್ನು ಸಹ ಹೆತ್ತಮಕ್ಕಳು ನೀಡದೇ ಹೋದಾಗ ಮನುಷ್ಯರಿಗಿಂತಲೂ ಗಿಡಮರಗಳು, ಪ್ರಾಣಿಪಕ್ಷಿಗಳೇ ಅದೆಷ್ಟೋ ಮೇಲು ಎನ್ನುವ ಸಮಾಧಾನವೊಂದು ಆ ತಾಯಿಗೆ ದೊರೆಯುತ್ತದೆ.

ಹೆಣ್ಣು ಅದೆಷ್ಟು ದುಡಿದರೂ ಸಾಲದು. ಅವಳು ಒಬ್ಬಳು ಮನುಷ್ಯಳು ಅವಳಿಗೂ ಆಯಾಸವಾಗುತ್ತದೆ ಎನ್ನುವ ಸೂಕ್ಷ್ಮತೆಯೊಂದು ಸಹ ಬಹುಪಾಲು ಪುರುಷರ ಗಮನಕ್ಕೆ ಬಾರದೆಯೇ ಹೋಗುವುದು ಒಂದು 'ವಿಪರ್ಯಾಸ'ವೇ ಸರಿ. ನಾಲ್ಕು ಗೋಡೆಗಳ ಮಧ್ಯೆ

[1] ವಿರಹ ಕಡಲು, ಜಯಪ್ರಕಾಶ ಮಾವಿನಕುಳಿ ಪು. 18

ಸದಾ ದುಡಿಯುವ ಹೆಣ್ಣಿನ ಆಯಾಸ ಜೀವವಿಲ್ಲದ ಆ ಗೋಡೆಗಳಿಗೆ ತಿಳಿಯುತ್ತದೆ. ಅವಳು ಮಲಗುವ ದಿಂಬುಗಳಿಗೆ ಅರಿವಾಗುತ್ತದೆ. ಅವುಗಳು ಹೇಗಿದ್ದವಳು ಹೇಗಾಗಿದ್ದಿಯಾ? ಯಾವಾಗಲೂ ದುಡಿಯುತ್ತಲೇ ಇರುತ್ತೀಯೆ, ನಿನಗೆ ವಿಶ್ರಾಂತಿ ಇಲ್ಲವೆ? ಎಂದು ಪ್ರಶ್ನಿಸುತ್ತವೆ. ಅವಳು ಮನೆ ಸುತ್ತಾ ನೆಟ್ಟ ಗಿಡ, ಮರ-ಬಳ್ಳಿಗಳು ಗೋಗರೆಯುತ್ತವೆ "ಅಕ್ಕಾ ನಮ್ಮ ಸೇವೆ ಸಾಕು. ನಿನಗೆ ವಿಶ್ರಾಂತಿ ಬೇಕು"[2] ಎಂದು ಹೇಳುತ್ತವೆ. ಆದರೆ ತಾನು ನಂಬಿ ಕೈಹಿಡಿದು ಬಂದ ಗಂಡ ಮಾತ್ರ ಹೆಂಡತಿಗೆ ವಿಶ್ರಾಂತಿ ಬೇಕು ಎನ್ನುವುದನ್ನು ಎಂದಿಗೂ ಅರಿತುಕೊಳ್ಳಲಾರ. ಇಂದು ಯಾವುದೇ ಸಂಬಳವಿಲ್ಲದೇ, ಯಾವುದೇ ರಜೆಯಿಲ್ಲದೇ, ಯಾವುದೇ ಬೇಡಿಕೆಗಳಿಲ್ಲದೇ, ಯಾವುದೇ ಮುಷ್ಕರವಿಲ್ಲದೇ ಸಾಗುತ್ತಿರುವ ಒಂದೇ ಒಂದು ವೃತ್ತಿಯೆಂದರೆ ಅದು ಗೃಹಿಣಿ ವೃತ್ತಿಯಾಗಿದೆ. ಇಷ್ಟಿದ್ದರೂ ಅವಳು ಬಯಸುವುದು ಒಂದೇ ಒಂದು ಉಡುಗೊರೆಯೆಂದರೆ ಅದು ತನ್ನ ಗಂಡನಿಂದ ದೊರೆಯುವ ಪ್ರಶಂಸೆ. ಅದೂ ಕೂಡ ದೊರೆಯದೇ ಹೋದಾಗ ಆ ಹೆಣ್ಣಿನ ಮನಸ್ಸು ಒಣಗಿದ ಹೂವಿನಂತಾಗಿಬಿಡುತ್ತದೆ. ಗೋಡೆ, ದಿಂಬು, ಗಿಡಮರ ಬಳ್ಳಿಗಳಿಗೆ ಇರುವಷ್ಟು ಸೌಜನ್ಯವೂ ಸಹ ಗಂಡನಿಗಿಲ್ಲ ಎನ್ನುವುದನ್ನು ಕವಿ

ನನ್ನ ಕೈಹಿಡಿದವನೇ
ಸಪ್ತಪದಿ ತುಳಿದವನು
ಕಣ್ಣು ಕೆಂಪಗೆ ಮಾಡಿ
ಬೊಗಳುತ್ತಾನೆ-
"ಏಯ್, ಏನಾಗಿದೆ ದಾಡಿ ನಿನಗೆ?" [3] – **(ವಿಪರ್ಯಾಸ)**

ಇಲ್ಲಿ ಗಂಡನನ್ನು ದೇವರೆಂದು ಪೂಜಿಸುವ ಹೆಂಡತಿಯನ್ನು ಗಂಡ ಮಾತ್ರ ದುಡಿಯುವ ಯಂತ್ರದಂತೆ ಬಳಸಿಕೊಂಡರೆ ಆ ಹೆಣ್ಣಿನ ದೃಷ್ಟಿಯಲ್ಲಿ ಆ ಗಂಡನ ಸ್ಥಾನ ನಾಯಿಗಿಂತಲೂ ಕೀಳು ಎನ್ನುವುದನ್ನು ಕವಿ 'ಬೊಗಳುತ್ತಾನೆ' ಎನ್ನುವ ಶಬ್ದ ಮೂಲಕ ನಿರ್ವಚಿಸುತ್ತಾರೆ. ಹೆಣ್ಣಿನ ಮನಸ್ಸು ಬಹು ಮೃದು. ಅವಳನ್ನು ಅವಳ ಕೈಹಿಡಿದವನು ಹೇಗೆ ನಡೆಸಿಕೊಳ್ಳುತ್ತಾನೆಯೋ ಅಷ್ಟೇ ಗೌರವಾದಾರಗಳು ಸಹ ಹೆಣ್ಣಿನಿಂದ ದೊರೆಯುತ್ತದೆ. ಇಲ್ಲವಾದರೆ ಗಂಡ ಅವಳ ದೃಷ್ಟಿಯಲ್ಲಿ ಪ್ರಾಣಿಗಿಂತಲೂ ಕೀಳುಮಟ್ಟಕ್ಕಿಳಿಯುತ್ತಾನೆ ಎನ್ನುವುದನ್ನು ಪುರುಷ ಸಮಾಜ ಅರಿತುಕೊಳ್ಳಬೇಕಿದೆ.

ಪ್ರಕೃತಿಯು ಮನುಷ್ಯನ ಎಲ್ಲಾ ಆಸೆಗಳನ್ನು ಈಡೇರಿಸುತ್ತದೆ. ಆದರೆ ಅವನ ದುರಾಸೆಗಳನ್ನು ಹೊರತುಪಡಿಸಿ ಪ್ರಕೃತಿ ಸಕಲ ಜಲಾಚರ ಪ್ರಾಣಿ-ಪಕ್ಷಿಗಳಿಗೂ ಸಮಾನಾವಕಾಶಗಳನ್ನು ನೀಡಿದೆ. ಇಲ್ಲಿನ ಸಂಪನ್ಮೂಲಗಳು ಎಲ್ಲರ, ಎಲ್ಲವುದವುಗಳ ಸ್ವತ್ತಾಗಿದೆ. ಆದರೆ ಮನುಷ್ಯ ಮಾತ್ರ ಅದನ್ನೆಲ್ಲಾ ತನ್ನ ಸ್ವಾರ್ಥಕ್ಕೆ ಬಳಸಿಕೊಂಡು, ಉಳಿದ ಜೀವಗಳ ಕುರಿತು ಕಿಂಚಿತ್ತೂ ಯೋಚನೆಯನ್ನು ಮಾಡದವಾಗಿದ್ದಾನೆ. ಅವನ ಸ್ವಾರ್ಥ ಅವನನ್ನು ಮೀರಿ ಇಂದು ಬೆಳೆದು ಇಡೀ ಪ್ರಕೃತಿ ಸಂಕುಲವನ್ನು ನಾಶಗೊಳಿಸಿದೆ. ಮರ-ಗಿಡಗಳು ಮನುಷ್ಯನ ಎಲ್ಲಾ ಬಯಕೆಗಳನ್ನು ಈಡೇರಿಸುತ್ತದೆ. ಅವನಿಗೆ ಉಸಿರಾಡಲು ಗಾಳಿ, ಕುಡಿಯಲು ನೀರು, ಮನೆಕಟ್ಟಲು ಕಲ್ಲು, ಮಣ್ಣು, ಕಟ್ಟಿಗೆ, ಆಹಾರ ಬೇಯಿಸಿಕೊಳ್ಳಲು ಕಟ್ಟಿಗೆ, ಶೃಂಗಾರಗೊಳ್ಳಲು ಹೂವು, ಹಸಿದಾಗ ತಿನ್ನಲು ಹಣ್ಣು ಹೀಗೆ ಎಲ್ಲವನ್ನೂ ಅವನಿಗಾಗಿಯೇ ನೀಡುತ್ತದೆ. ತನಗೆ ಏನನ್ನೂ ಕೂಡ ಉಳಿಸಿಕೊಳ್ಳದೇ ಸಕಲವನ್ನು ಅವನಿಗೆ ಕೊಡುತ್ತದೆ. ಆದರೆ ಮನುಷ್ಯ ಈ ಮರಗಳಿಗೆ ಏನನ್ನು ಕೊಡುತ್ತಾನೆ. ಕೇವಲ ಕೊಡಲಿ ಪೆಟ್ಟನ್ನು ಹೊರತುಪಡಿಸಿ ಎನ್ನುವುದನ್ನು ಕವಿ 'ಮರ ಮತ್ತು ಮನುಷ್ಯ' ಕವಿತೆಯ ಮೂಲಕ ನಿರೂಪಿಸುತ್ತಾರೆ.

---
[2] ಕಾಲಯಾನ, ಜಯಪ್ರಕಾಶ, ಮಾವಿನಕುಳಿ, ಪು. 15
[3] ಕಾಲಯಾನ, ಜಯಪ್ರಕಾಶ, ಮಾವಿನಕುಳಿ, ಪು. 15

ರಣಬಿಸಿಲಿನಲ್ಲಿ

ಮರದ ಕೆಳಗಡೆ ಬಂದು ನಿಂತರು –

ನೆರಳಿಗೆ.

ಬಿಸಿಲು ಹೋಗಿ

ಮಳೆ ರಾಚಿದಾಗ

ಮರ ಕಡಿದು ಸೀಳಿ

ಸುಟ್ಟು ಬಿಸಿ ಮಾಡಿಕೊಂಡರು[4] **– (ಮರ ಮತ್ತು ಮನುಷ್ಯ)**

ಎನ್ನುವಲ್ಲಿ ಮನುಷ್ಯ ಸ್ವಾರ್ಥದ ಸ್ತರ ಚಿತ್ರಣಗೊಳ್ಳುತ್ತದೆ. ಮನುಷ್ಯನಿಗೆ ಬಿಸಿಲಿನ ಝಳ ಝಳಪಿಸಿದಾಗ ಅವನಿಗೆ ಮರದ ನೆರಳಿನ ಅವಶ್ಯಕತೆಯಿರುತ್ತದೆ. ಆದರೆ ಅದೇ ಮಳೆ ಬಂದಾಗ ತನಗೆ ನೆರಳನ್ನು ನೀಡಿದ ಮರವನ್ನು ಯಾವುದೇ ಕನಿಕರವಿಲ್ಲದೇ ಕಡಿದು ತನ್ನ ಚಳಿಯನ್ನು ಹೋಗಲಾಡಿಸಿಕೊಳ್ಳಲು ಕಟ್ಟಿಗೆಯನ್ನಾಗಿಸಿಕೊಂಡು ಸುಟ್ಟು ಬೂದಿಮಾಡಿ ಬಿಡುತ್ತಾನೆ. ಮನುಷ್ಯನ ಮುಂದೆ ನಿಯತ್ತಿಗಾಗಲೀ, ಮಾಡಿದ ಉಪಕಾರಕ್ಕಾಗಲೀ ಯಾವುದೇ ಬೆಲೆಯಿಲ್ಲ ಎನ್ನುವುದನ್ನು ಮನುಷ್ಯನೇ ನಿರೂಪಿಸಿಬಿಡುತ್ತಾನೆ.

ಯಾವುದೇ ಸ್ವಾರ್ಥವಿಲ್ಲದೆ ಇರುವ ಅರಣ್ಯ, ಕಾಡುಪ್ರಾಣಿಗಳು ಇಂದು ಮನುಷ್ಯನ ಅಟ್ಟಹಾಸಕ್ಕೆ ನಲುಗಿಹೋಗಿ ತತ್ತರಿಸುತ್ತಿವೆ ಎನ್ನುವುದನ್ನು ಮಾವಿನಕುಳಿ ಅವರು 'ನವಿಲುಗಳು ಅಳುತ್ತವೆ' ಕವಿತೆಯ ಮೂಲಕ ಕಟ್ಟಿಕೊಡುತ್ತಾರೆ. ಇಲ್ಲಿ ಕವಿ ಪಕ್ಷಿಗಳಿಗೂ ಭಾವನೆಗಳಿವೆ, ಆ ಮೂಕಪ್ರಾಣಿಗಳಿಗೂ ನೋವು–ಭಯವಾಗುತ್ತದೆ ಎನ್ನುವುದನ್ನು ಅವುಗಳು ಅಳುತ್ತವೆ ಎನ್ನುವ ರೂಪಕದ ಮೂಲಕ ನಿರೂಪಿಸುತ್ತಾರೆ.

ನಡುರಾತ್ರಿಯಲಿ

ಭೂತ ಸಂಚಾರ ಹೊತ್ತಿನಲಿ

ದಿಢೀರೆಂದು ಎಚ್ಚರಾಗಿ

ಕೇಳಿದರೆ –

ದೂರದ ಬೆಟ್ಟದಿಂದ ಅಳುವ ಧ್ವನಿಗಳು

ಕನಸೆಂದು, ಭ್ರಮೆಯೆಂದು

ಮಲಗಲು ಹವಣಿಸಿದರೆ

ಮತ್ತದೇ ಅಳುವ ಧ್ವನಿಗಳು

ನವಿಲುಗಳು ಅಳುತ್ತವೆ[5] **– (ನವಿಲುಗಳು ಅಳುತ್ತವೆ)**

ಮನುಷ್ಯ ತನ್ನ ಸ್ವಾರ್ಥಕ್ಕೆ ಇಂತಹ ಅದೆಷ್ಟೋ ಮೂಕಪ್ರಾಣಿಗಳನ್ನು ಬಲಿಕೊಡುತ್ತಾ, ಅವುಗಳ ಸ್ಥಳವನ್ನು ತನ್ನದೆನ್ನುವ ಅಹಂಕಾರದಿಂದ ನಡೆದುಕೊಳ್ಳುತ್ತಿದ್ದಾನೆ. ಅವುಗಳ ಸ್ಥಳದಲ್ಲಿ ತಾನು ಹೋಗುವುದೆಂದುಕೊಳ್ಳುವ ಮನುಷ್ಯ ತಾನಿರುವ ಸ್ಥಳಕ್ಕೆ ಆಹಾರವನ್ನರಸುತ್ತಾ ಅದೇ ಪ್ರಾಣಿಗಳು ಇವನ ಸ್ಥಳಕ್ಕೆ ಬಂದರೆ ಅವುಗಳನ್ನು ಸಾವಿನ ದವಡೆಗೆ ತಳ್ಳುತ್ತಾನೆ. ತನ್ನ ಆಡಂಬರಕ್ಕಾಗಿ ಕಾಡಿನ ಮರಗಳನ್ನು ಕಡಿದನು. ಭೂಮಿ ಸಂಪನ್ಮೂಲಗಳನ್ನು ನಾಶಗೊಳಿಸಿ ಅರಣ್ಯಜೀವಿಗಳ ಸಂತೋಷವನ್ನೇ ಕಸಿದುಕೊಂಡುಬಿಟ್ಟರು. ತನ್ನ ಖುಷಿಗಾಗಿ ಹೇಗೋ ಬದುಕುತ್ತಿದ್ದ ಆ ಪ್ರಾಣಿಗಳನ್ನು ಬೇಟೆಯ ಹೆಸರಿನಲ್ಲಿ ಮಾರಣಹೋಮ ಮಾಡಿದ. ಇವರ ಅಟ್ಟಹಾಸಕ್ಕೆ ನಲುಗಿದ ಪ್ರಾಣಿಪಕ್ಷಿಗಳ ಮೂಕರೋಧನೆ ಇಲ್ಲಿ ಜೀವಂತವಾಗಿ ಚಿತ್ರಿತಗೊಳ್ಳುತ್ತದೆ.

ಬಾಲ್ಯದಲಿ ಗಿಡಮರಗಳು ತುಂಬಾ

ಕತ್ತಲ ಕೂಲದ ದೂರದ ಬೆಟ್ಟ

ಹಕ್ಕಿ, ಪಕ್ಷಿ, ಜೇನುಗಳ ತವರು

ಪ್ರಾಣಿ ಪ್ರಪಂಚದ ವಾಸಸ್ಥಾನ

ಎಲ್ಲ ಬೇರುಗಳು ಸಿದ್ಧೌಷಧ

ಸರೀಸೃಪಗಳ ರಾಜ ಕಾಳಿಂಗನ ನೆಲೆ

ಇವೆಲ್ಲಾ ಇದ್ದು[6] **– (ನವಿಲುಗಳು ಅಳುತ್ತವೆ)**

[4] ಕಾಲಯಾನ, ಜಯಪ್ರಕಾಶ, ಮಾವಿನಕುಳಿ, ಪು. 20

[5] ವಿರಹ ಕಡಲು, ಜಯಪ್ರಕಾಶ ಮಾವಿನಕುಳಿ, ಪು.29

[6] ವಿರಹ ಕಡಲು, ಜಯಪ್ರಕಾಶ ಮಾವಿನಕುಳಿ, ಪು.29

ಕವಿ ತಮ್ಮ ಬಾಲ್ಯ ದಿನಗಳನ್ನು ನೆನೆಯುತ್ತಾ ದಟ್ಟ ಹಚ್ಚಹಸಿರಿನ ನಡುವೆ ಕಂಡ ಸುಂದರ ಚಿತ್ರವನ್ನು ಪದ್ಯ ರೂಪದಲ್ಲಿ ಕಟ್ಟಿಕೊಡುತ್ತಿದ್ದಾರೆ. ಅಂದಿದ್ದ ಹಸಿರು ಇಂದು ಮಾಯವಾಗಿದೆ. ದೂರದ ಬೆಟ್ಟ, ಹಕ್ಕಿ, ಪಕ್ಷಿ, ಜೇನು ಇಂದು ಕಣ್ಮರೆಯಾಗಿದೆ. ಕಾಡು ಕೇವಲ ಪ್ರಾಣಿಗಳ ಆವಾಸಸ್ಥಾನವಷ್ಟೇ ಆಗಿರಲಿಲ್ಲ, ಬದಲಿಗೆ ಮನುಷ್ಯನ ರೋಗಗಳಿಗೆ ನೈಸರ್ಗಿಕ ಔಷಧಗಳನ್ನು ನೀಡುತ್ತಿದ್ದ ವನ ಅದಾಗಿತ್ತು. ಆದರೆ ಇಂದು ಮನುಷ್ಯ ಇವುಗಳ ಶಕ್ತಿಯನ್ನು ಅರಿಯದೇ ಅವುಗಳನ್ನೇ ಇಂದು ನಾಶಗೊಳಿಸಿಬಿಟ್ಟಿದ್ದಾನೆ. ಅಂದಿದ್ದ ಕಾನನದ ನಡುವಿನ ನವಿಲು ಕಾರ್ಮುಗಿಲಿಗೆ ರೆಕ್ಕೆ ಬಿಚ್ಚಿ ಸ್ವಚ್ಛಂದವಾಗಿ ಹಾರಾಡಿಕೊಂಡಿತ್ತು. ಅವುಗಳ ಬೇಟೆಯಾದ ಹಾವುಗಳು, ಸರೀಸೃಪಗಳಿಂದ ಅವುಗಳು ಆಹಾರಗಳನ್ನು ಧಕ್ಕಿಸಿಕೊಳ್ಳುತ್ತಿದ್ದವು. ಮನುಷ್ಯನ ಸ್ವಾರ್ಥ ಅವನ ಹಸಿವನ್ನಷ್ಟೇ ನೋಡುತ್ತದೆ ಹೊರತು ಇಂತಹ ಪ್ರಾಣಿಪಕ್ಷಿಗಳ ಹಸಿವು ಅವನಿಗೆ ಕಾಣುವುದೇ ಇಲ್ಲ. ಹಾಗಾಗಿ ಇಂದು ಕಾಡಿನಲ್ಲಿದ್ದ ನವಿಲುಗಳ ಸಂಖ್ಯೆಯೂ ಇಂದು ಕ್ಷೀಣಿಸುತ್ತಿದೆ.

ಹೊಂಬಣ್ಣದ ಚೆಂದದ ನವಿಲುಗಳು
ಗೆಳತಿ ಎಲ್ಲಿ ಹೋದವೇ
ಕೇಳಿಸಿತೇನೇ ಅಳುವುದು
ನಿಸರ್ಗ ರಕ್ತದ ರುಚಿ ಕಂಡ
ಕೋರೇಹಲ್ಲಿನ ಭಕಾಸುರನ ಅಟ್ಟಹಾಸ
ನೋಡಿದ ನವಿಲುಗಳು

ಅಳುತ್ತಿವೆ –
ಕಣ್ಣಿನಿಂದ ರಕ್ತಧಾರೆ[7] **– (ನವಿಲುಗಳು ಅಳುತ್ತವೆ)**

ಇಲ್ಲಿ ಕವಿ ಸುಂದರ ಪಕ್ಷಿಗಳ ಬದುಕನ್ನು ಕಸಿದುಕೊಂಡ ಮಾನವನಿಗೆ ಕೋರೆಹಲ್ಲಿನ ಭಕಾಸುರನ ರೂಪಕವನ್ನು ನೀಡುತ್ತಿದ್ದಾರೆ. ಮನುಷ್ಯನು ಮನುಷ್ಯತ್ವದಿಂದ ನಡೆದುಕೊಂಡರೆ ಅವನು ದೇವರು. ಇಲ್ಲವಾದರೆ ಅವನು ರಾಕ್ಷಸ ಎನ್ನುವುದರ ಒಳಾರ್ಥವನ್ನು ಕವಿ ಈ ರೂಪಕದ ಮೂಲಕ ನಿರೂಪಿಸುತ್ತಾರೆ. ಇಂತಹ ರಾಕ್ಷಸತ್ವದ ಮನುಷ್ಯನ ಮೃಗೀಯ ವರ್ತನೆಯನ್ನು ಕಂಡ ನವಿಲುಗಳು ಕೇವಲ ಕಣ್ಣೀರು ಸುರಿಸುತ್ತಿಲ್ಲ ಅವುಗಳ ರಕ್ತಧಾರೆಯನ್ನೇ ಹರಿಸುತ್ತಿವೆ. ಇನ್ನಾದರೂ ಇಂತಹ ಮೂಕಜೀವಿಗಳ ಅರಣ್ಯರೋಧನವನ್ನು ಮನುಷ್ಯ ಅರ್ಥಮಾಡಿಕೊಳ್ಳಬೇಕಾದ ಅನಿವಾರ್ಯತೆಯಿದೆ ಎನ್ನಬಹುದಾಗಿದೆ.

ಜಯಪ್ರಕಾಶ ಮಾವಿನಕುಳಿಯವರು ಪ್ರಾಕೃತಿಕ ಗೀತೆಗಳನ್ನು ರಚಿಸುವಾಗ ಮಣ್ಣು, ಬೆಳದಿಂಗಳು, ಬೆಳಕು, ಕಾಡು, ಸಮುದ್ರ, ಚಂದ್ರ ಮೊದಲಾದ ಅನೇಕ ಸಂಗತಿಗಳನ್ನು ಇವರ ಕವನ ಸಂಕಲನಗಳಲ್ಲಿ ಚಿತ್ರಿಸುತ್ತಾರೆ. ಇಲ್ಲಿ ಕವಿ ಸಂಪೂರ್ಣ ಪ್ರಾಕೃತಿಕ ಚಿತ್ರಣಗಳನ್ನು ಬಳಸಿಕೊಳ್ಳುವಲ್ಲಿ ಹಿಂದೆಬೀಳುತ್ತಾರೆ. ಆದರೆ ಅವುಗಳೆಲ್ಲವನ್ನು ತಮ್ಮ ಕವಿತೆಗಳಲ್ಲಿ ಅಲ್ಲಲ್ಲಿ ರೂಪಕ, ಪ್ರತಿಮೆಗಳಾಗಿ ತಂದು ಸಹೃದಯ ಓದುಗರಿಗೆ ಮಾತ್ರ ನಿಲುಕುವಂತೆ ಚಿತ್ರಿಸಿದ್ದಾರೆ.

ಆಕರ ಗ್ರಂಥಗಳು

- ಜಯಪ್ರಕಾಶ ಮಾವಿನಕುಳಿ. (2015). *ಕಾಲಯಾನ.* ಸ್ಫಟಿಕ ಪ್ರಕಾಶನ.
- ಜಯಪ್ರಕಾಶ ಮಾವಿನಕುಳಿ. (2004). *ವಿರಹ ಕಡಲು (ಕವಿತೆಗಳು).* ಸ್ಫಟಿಕ ಪ್ರಕಾಶನ.
- ಜಯಪ್ರಕಾಶ ಮಾವಿನಕುಳಿ. (1984). *ಅಶ್ವತ್ಥಾಮ/ಕವಿತೆಗಳು.* ಸಮೀರ ಪ್ರಕಾಶನ.
- ಜಯಪ್ರಕಾಶ ಮಾವಿನಕುಳಿ. (1978). *ಸಾಗರದಲ್ಲಿ ಸಾಯಂಕಾಲ.* ಅಕ್ಷರ ಪ್ರಕಾಶನ.

ಪರಾಮರ್ಶನ ಗ್ರಂಥಗಳು

- ಕೀರ್ತಿನಾಥ ಕುರ್ತುಕೋಟಿ. (2021). *ಯುಗಧರ್ಮ ಹಾಗೂ ಸಾಹಿತ್ಯ ದರ್ಶನ.* ಮನೋಹರ ಗ್ರಂಥಮಾಲಾ.

[7] ಅದೇ., ಪು. 29

- ಮುಗುಳಿ, ರಂ. ಶ್ರೀ. (2018). *ಕನ್ನಡ ಸಾಹಿತ್ಯ ಚರಿತ್ರೆ.* ಗೀತಾ ಬುಕ್ ಹೌಸ್.
- ಶಿವರುದ್ರಪ್ಪ, ಜಿ.ಎಸ್. (2021). *ಕನ್ನಡ ಸಾಹಿತ್ಯ ಸಮೀಕ್ಷೆ.* ಸಪ್ನ ಬುಕ್ ಹೌಸ್.
- ಶೇಷಗಿರಿ ರಾವ್, ಎಲ್.ಎಸ್. (2020). *ಹೊಸಗನ್ನಡ ಸಾಹಿತ್ಯ ಚರಿತ್ರೆ.* ಅಂಕಿತ ಪುಸ್ತಕ.